**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಿವಕುಮಾರ್.ಕೆ ರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:** ಆಸಿಡ್ ದಾಳಿಯು ಕೇವಲ ಅಪರಾಧವಲ್ಲ, ಅದು ಒಬ್ಬ ವ್ಯಕ್ತಿಯ ಬದುಕುವ ಹಕ್ಕಿನ ಮೇಲಿನ ಅಟ್ಟಹಾಸವಾಗಿದೆ. ಈ ಸಂತ್ರಸ್ತೆಯರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ನೆರವಿಗೆ ಧಾವಿಸಿ ಅವರುಗಳಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ಸೌಲಭ್ಯ, ಮಾಸಿಕ ಪರಿಹಾರ ಮತ್ತು ವೇತನ, ವಾಸಸ್ಥಳ ಮತ್ತು ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ ಒದಗಿಸುವ ಬಗ್ಗೆ, ಹಾಗೂ ಆಸಿಡ್ ಮಾರಾಟದ ಮೇಲೆ ನಿರ್ಬಂಧ ಹೇರುವುದಕ್ಕೆ ಕ್ರಮಗಳನ್ನು ಕೈಗೊಳ್ಳಬೇಕೆನ್ನುವ ಬಗ್ಗೆ.

**ಉತ್ತರ:** **ವೈದ್ಯಕೀಯ ಚಿಕಿತ್ಸೆ ಮತ್ತು ಸೌಲಭ್ಯ:-**"ಮಾನ್ಯ ನ್ಯಾಯಾಲಯವು ಹೊರಡಿಸಿದ ನಿರ್ದೇಶನಗಳ ಪ್ರಕಾರ, ಸರ್ಕಾರದ ಆದೇಶ ಸಂಖ್ಯೆ: ಆಕುಕ 33 ಸಿಜಿಇ 2022 ಬೆಂಗಳೂರು, ದಿನಾಂಕ: 20.03.2023 ರಂತೆ ಆಸಿಡ್ ದಾಳಿಗೆ ಒಳಗಾದ ಸಂತ್ರಸ್ತರಿಗೆ ರೂ.5 ಲಕ್ಷಗಳ ಆರ್ಥಿಕ ಮಿತಿಯೊಂದಿಗೆ PHH ಮತ್ತು NPHH (ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ) ಎನ್ನುವ ತಾರತಮ್ಯವಿಲ್ಲದೆ ನಗದು ರಹಿತಾ ಚಿಕಿತ್ಸಾ ಸೌಲಭ್ಯವನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ" ಯೋಜನೆಯಡಿ ನೊಂದಾಯಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಆಸಿಡ್ ದಾಳಿಗೆ ಒಳಗಾದ ಸಂತ್ರಸ್ತೆಯರಿಗೆ ಸರ್ಕಾರ ನಿಗದಿ ಪಡಿಸಿದ ಪರಿಹಾರ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಪಾವತಿಸಲಾಗುತ್ತಿದೆ. ವೈದ್ಯಕೀಯ ವೆಚ್ಚಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದಂತೆ ಮಧ್ಯಂತರ ಪರಿಹಾರವನ್ನು ಸಹ ನೀಡಲಾಗುತ್ತಿದೆ.

**ಮಾಸಿಕ ಪರಿಹಾರ ಮತ್ತು ವೇತನ:-** ಆಸಿಡ್ ದಾಳಿಗೆ ಒಳಗಾದ ಎಲ್ಲಾ ಮಹಿಳೆಯರಿಗೆ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡುವ ಹಾಗೂ ಸಮಾಜದಲ್ಲಿ ಗೌರವಪೂರ್ವಕವಾಗಿ ಬದುಕಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಮಾಸಿಕ ಪಿಂಚಣಿ ಸೌಲಭ್ಯ ನೀಡಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ ಡಿಎಸ್ಎಸ್‌ಪಿ/ಓಎಪಿ/7/2022 ದಿನಾಂಕ. 11-04-2022 ರನ್ವಯ ಸದರಿ ಯೋಜನೆಯಡಿ ದಿನಾಂಕ: 01-04-2022 ರಿಂದ ಮಾಸಿಕ ರೂಪಾಯಿ 10,000/- ಪಿಂಚಣಿಯನ್ನು ಪಾವತಿಸಲಾಗುತ್ತಿದೆ. 2025ರ ಡಿಸೆಂಬರ್ ಮಾಹೆಯಲ್ಲಿ ಒಟ್ಟು 59 ಫಲಾನುಭವಿಗಳಿಗೆ ಪಿಂಚಣಿಯನ್ನು ಪಾವತಿಸಲಾಗಿದೆ."

**ವಾಸಸ್ಥಳ ಮತ್ತು ವಸತಿ ಸೌಲಭ್ಯ:-** ರಾಜೀವ್ ಗಾಂಧಿ ವಸತಿ ನಿಗಮದಿಂದ ನಿವೇಶನ ಹೊಂದಿರುವವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ, ಆದರೆ ಆಸಿಡ್ ದಾಳಿಗೊಳಗಾದ ಸಂತ್ರಸ್ತ ಮಹಿಳೆಯರು ನಿವೇಶನ ಹೊಂದಿಲ್ಲದ ಕಾರಣ ಇವರಿಗೆ ವಸತಿ ನಿರ್ಮಿಸಿಕೊಡಲು ಕಷ್ಟಸಾಧ್ಯವಾಗಿರುವುದರಿಂದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಪತ್ರ ಸಂಖ್ಯೆ:ಮಅನಿ/ಆಸಿಡ್/ವಸತಿ/02/2024-25(122348),ದಿನಾಂಕ: 30.09.2024 ರಲ್ಲಿ ಆಸಿಡ್ ದಾಳಿಗೊಳಗಾದ ಸಂತ್ರಸ್ತ ಮಹಿಳೆಯರಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಚಾಲ್ತಿಯಿರುವ ಯೋಜನೆಗಳಲ್ಲಿ ಮನೆ ನಿರ್ಮಿಸಿಕೊಡಲು ಕೋರಲಾಗಿರುತ್ತದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ

Scanned with OKEN Scanner

2024-25ನೇ ಸಾಲಿನ ದ್ವಿತೀಯ ಮಂಡಳಿ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:10 ರಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಅನುಷ್ಠಾನಗೊಳಿಸುತ್ತಿರುವ ಬಹುಮಹಡಿ ಮಾದರಿ ಮನೆಗಳ ಪೈಕಿ 26 ಮನೆಗಳನ್ನು ಹಂಚಿಕೆ ಮಾಡಲು ಅನುಮೋದಿಸಲಾಗಿರುತ್ತದೆ.

ಮುಂದುವರೆದು, ಉಳಿದ 28 ಸಂತ್ರಸ್ತ ಮಹಿಳೆಯರ ವಿವರಗಳನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಪತ್ರ ಸಂಖ್ಯೆ: ಮಅನಿ/ಆಸಿಡ್/ವಸತಿ/02/2024-25(122348) ದಿನಾಂಕ:29.11.2025 ರಲ್ಲಿ ಸಂತ್ರಸ್ತ ಮಹಿಳೆಯರಿಗೆ ವಸತಿ ಸೌಲಭ್ಯವನ್ನು ಒದಗಿಸಿ ಕೊಡಲು ಪತ್ರಿಸಲಾಗಿರುತ್ತದೆ.

**ಜಿಲ್ಲಾವಾರು ವಿವರ ಈ ಕೆಳಗಿನಂತಿದೆ**

| ಕ್ರ. ಸಂ | ಜಿಲ್ಲೆಯ ಹೆಸರು | ಫಲಾನಿಭವಿಗಳ ಸಂಖ್ಯೆ |
|---|---|---|
| 1 | ಬೆಂಗಳೂರು | 14 |
| 2 | ಚಿಕ್ಕಮಗಳೂರು | 7 |
| 3 | ಶಿವಮೊಗ್ಗ | 5 |
| 4 | ತುಮಕೂರು | 4 |
| 5 | ಬೆಳಗಾವಿ | 3 |
| 6 | ಮೈಸೂರು | 3 |
| 7 | ದಾವಣಗೆರೆ | 2 |
| 8 | ಬೆಂಗಳೂರು ಗ್ರಾಮಾಂತರ | 2 |
| 9 | ವಿಜಯಪುರ | 2 |
| 10 | ಉಡುಪಿ | 1 |
| 11 | ಕಲಬುರಗಿ | 1 |
| 12 | ಕೊಪ್ಪಳ | 1 |
| 13 | ಕೋಲಾರ | 1 |
| 14 | ಗದಗ | 1 |
| 15 | ಚಿಕ್ಕಬಳ್ಳಾಪುರ | 1 |
| 16 | ದಕ್ಷಿಣ ಕನ್ನಡ | 1 |
| 17 | ಯಾದಗಿರಿ | 1 |
| 18 | ರಾಮನಗರ | 1 |
| 19 | ರಾಯಚೂರು | 1 |
| 20 | ಹಾವೇರಿ | 1 |
| 21 | ಹಾಸನ | 1 |
| | **Grand Total** | **54** |

**ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ:-** "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಸೇವಾ ನಿಯಮಗಳು-1) ಇಲಾಖೆಯಿಂದ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ವಿವಿಧ ಪ್ರವರ್ಗಗಳಿಗೆ ಮೀಸಲಾದ ಪ್ರಮಾಣದನ್ವಯ ರೋಸ್ಟರ್ ಬಿಂದುಗಳನ್ನು ಗುರುತಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶಗಳಲ್ಲಿ ಆಸಿಡ್ ದಾಳಿಯಾದ ಸಂತ್ರಸ್ಥೆಯರಿಗೆ ಸಮತಳ ಮೀಸಲಾತಿ (Horizontal Reservation) ಬಿಂದುಗಳನ್ನು ನಿಗದಿಪಡಿಸಿರುವುದಿಲ್ಲ".

Scanned with OKEN Scanner

ಸ್ವಯಂ ಉದ್ಯೋಗ:- 2023-24 ನೇ ಸಾಲಿನ ಜುಲೈ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ:134 ರಲ್ಲಿ ರಾಜ್ಯದಲ್ಲಿ, ಆಸಿಡ್ ದಾಳಿ ಸಂತ್ರಸ್ತರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಇವರಿಗೆ ಸ್ವಯಂ ಉದ್ಯೋಗಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ 5 ಲಕ್ಷ ರೂ.ಗಳಿಗೆ ಬಡ್ಡಿ ರಹಿತ ಸಾಲ ಸೌಲಭ್ಯ ಒದಗಿಸಲು 2 ಕೋಟಿ ರೂ. ಅನುದಾನ ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ವಸತಿ ಸೌಲಭ್ಯವನ್ನು ಒದಗಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ : ಮಮಇ 59 ಮಅನಿ 2023 ದಿನಾಂಕ : 03.01.2024 ರಲ್ಲಿ "ರಾಜ್ಯದಲ್ಲಿನ ಆಸಿಡ್ ದಾಳಿ ಸಂತ್ರಸ್ತರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಪ್ರತಿ ಫಲಾನುಭವಿಗೆ ರೂ.5.00 ಲಕ್ಷಗಳವರೆಗೆ ಬಡ್ಡಿ ರಹಿತ ಸಾಲ ಸೌಲಭ್ಯ ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ವಸತಿ ಕಲ್ಪಿಸಲು ರೂ.5.00 ಲಕ್ಷಗಳನ್ನು ಒದಗಿಸುವಂತೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ, ಈ ಯೋಜನೆಯ ಅನುಷ್ಠಾನಕ್ಕೆ ಅವಶ್ಯಕವಿರುವ ಸ್ವ ಉದ್ಯೋಗಕ್ಕಾಗಿ ರೂ.200.00 ಲಕ್ಷ ಮತ್ತು ಪ್ರತಿ ಫಲಾನುಭವಿಗೆ ರೂ.5.00 ಲಕ್ಷಗಳಂತೆ ಒಟ್ಟು 80 ಫಲಾನುಭವಿಗಳ ವಸತಿ ಸೌಲಭ್ಯಕ್ಕಾಗಿ ರೂ. 400.00 ಲಕ್ಷ ಹೀಗೆ ಒಟ್ಟು ರೂ.600.00 ಲಕ್ಷಗಳನ್ನು ನಿಗಮದ ಕಿರುಸಾಲ ಯೋಜನೆಯ ಮರುಪಾವತಿ ಮೊತ್ತದಿಂದ ಭರಿಸಲು ಆದೇಶಿಸಲಾಗಿರುತ್ತದೆ.

**ಆಸಿಡ್ ದಾಳಿ ಸಂತ್ರಸ್ತ ಮಹಿಳೆಯರಿಗೆ ಸಾಲ ಸೌಲಭ್ಯ ಯೋಜನೆ:-**

ಅದರಂತೆ ಆಸಿಡ್ ದಾಳಿ ಸಂತ್ರಸ್ತೆ ಮಹಿಳೆಯರಿಗೆ ಸಾಲ ಸೌಲಭ್ಯ ಯೋಜನೆ (ಗೆಳತಿ)ಯಡಿ ರಾಜ್ಯದ 18 ಜಿಲ್ಲೆಗಳಿಂದ ಒಟ್ಟು 47 ಅರ್ಜಿಗಳನ್ನು ಅರ್ಜಿದಾರರಿಗೆ ಸ್ವೀಕರಿಸಲಾಗಿದೆ. ಅದರಲ್ಲಿ ಅರ್ಹ 31 ಫಲಾನುಭವಿಗಳಿಗೆ ಯೋಜನಾ ವರದಿಯನ್ನು (ಘಟಕ ವೆಚ್ಚ) ಆಧರಿಸಿ ಶೇಕಡ 50 ರಷ್ಟು ಸಾಲ ಹಾಗೂ ಶೇಕಡ 50 ರಷ್ಟು ಸಹಾಯಧನವನ್ನು ಒದಗಿಸಲಾಗಿದ್ದು, ಅಗತ್ಯ ದಾಖಲೆಗಳನ್ನು ಒದಗಿಸಿ ಈ ಯೋಜನೆಯಡಿ ಆರ್ಥಿಕ ಸೌಲಭ್ಯವನ್ನು ಪಡೆಯುವಂತೆ ಉಳಿದ ಅರ್ಜಿದಾರರಿಗೆ ತಿಳಿಸಲಾಗಿದೆ.

**ಗೆಳತಿ ಯೋಜನೆ (ಸಾಲ ಸೌಲಭ್ಯ)ಯಡಿ ಸ್ವೀಕರಿಸಿರುವ ಅರ್ಜಿಗಳ ವಿವರ (ಜಿಲ್ಲಾವಾರು)**

| ಕ್ರ.ಸಂ. | ಜಿಲ್ಲೆಯ ಹೆಸರು | ಸ್ವೀಕರಿಸಿರುವ ಒಟ್ಟು ಅರ್ಜಿಗಳು | ಮಂಜೂರು | ಬಾಕಿ | ಷರಾ |
|---|---|---|---|---|---|
| 1 | ಕೊಪ್ಪಳ | 1 | 1 | 0 | |
| 2 | ದಕ್ಷಿಣ ಕನ್ನಡ | 1 | 1 | 0 | |
| 3 | ಉಡುಪಿ | 1 | 1 | 0 | |
| 4 | ಹಾಸನ | 1 | 1 | 0 | |
| 5 | ಯಾದಗಿರಿ | 1 | 1 | 0 | |
| 6 | ಬೆಳಗಾವಿ | 3 | 2 | 1 | |

Scanned with OKEN Scanner

| | | | | | |
|---|---|---|---|---|---|
| 7 | ಶಿವಮೊಗ್ಗ | 5 | 5 | 0 | |
| 8 | ಮೈಸೂರು | 2 | 1 | 1 | |
| 9 | ರಾಯಚೂರು | 1 | 1 | 0 | |
| 10 | ಕಲಬುರಗಿ | 1 | 0 | 1 | |
| 11 | ದಾವಣಗೆರೆ | 2 | 1 | 1 | KSRTCಉದ್ಯೋಗಿ ಒಬ್ಬರು ತಿರಸ್ಕರಿಸಿದ್ದಾರೆ |
| 12 | ಬೆಂಗಳೂರು ನಗರ | 12 | 6 | 6 | |
| 13 | ಬೆಂಗಳೂರು ಗ್ರಾಮಾಂತರ | 2 | 0 | 2 | |
| 14 | ಚಿಕ್ಕಬಳ್ಳಾಪುರ | 1 | 1 | 0 | |
| 15 | ಕೋಲಾರ | 2 | 2 | 0 | |
| 16 | ವಿಜಯಪುರ | 2 | 2 | 0 | |
| 17 | ತುಮಕೂರು | 3 | 1 | 2 | |
| 18 | ಚಿಕ್ಕಮಗಳೂರು | 6 | 4 | 2 | |
| | ಒಟ್ಟು | **47** | **31** | **16** | |

**ಸಂಖ್ಯೆ: ಹೆಚ್‌ಡಿ 12 ಪಿಸಿಕ್ಯೂ 2026**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

Scanned with OKEN Scanner